CW-03
PW-04

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 488/2024

ದಿ. 04-02-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-03
ಫ್ರಾಸಾ-04

| | |
|---|---|
| ಸಾಕ್ಷಿದಾರರ ಹೆಸರು | ರವಿಕುಮಾರ |
| ತಂದೆಯ ಹೆಸರು | ಗಂಗಪ್ಪ |
| ವಯಸ್ಸು | 27 ವರ್ಷ |
| ಉದ್ಯೋಗ | ಕಂಪ್ಯೂಟರ್ ಆಪರೇಟರ್ |
| ವಾಸಸ್ಥಳ | ಮಲದಕಲ್ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1, 2, 4 ರಿಂದ 6 ಗೊತ್ತು.

2. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಸಹ ನನಗೆ ಗೊತ್ತು.

3. ನಾನು ಕಳೆದ 5 ವರ್ಷಗಳಿಂದ ಮಲದಕಲ್ ಗ್ರಾಮದಲ್ಲಿರುವ ಚಾಸಾ-2 ಈತನ ನ್ಯಾಯ ಬೆಲೆ ಅಂಗಡಿಯಲ್ಲಿ ಕಂಪ್ಯೂಟರ್ ಆಪರೇಟರ್ ಎಂದು ಕೆಲಸ ಮಾಡುತ್ತಿದ್ದು, ಸದರಿ ಅಂಗಡಿಗೆ ಸಂಬಂಧಿಸಿದಂತೆ ಹೀರೆಬೂದೂರು

CW-03
PW-04

ಗ್ರಾಮದಲ್ಲಿಯೂ ಸಹ ಅವರದ್ದೆ ನ್ಯಾಯ ಬೆಲೆ ಅಂಗಡಿ ಇರುತ್ತದೆ ಮತ್ತು ಅಲ್ಲಿಯೂ ಸಹ ಕೆಲಸ ಮಾಡುತ್ತಿರುತ್ತೇನೆ.

4. ದಿಃ 25-07-2024 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ನಾನು, ಚಾಸಾ-1, 2, 4 ಮತ್ತು 6 ಎಲ್ಲರೂ ಸೇರಿ ಚಾಸಾ-7 ಈತನ ಹೀರೆಬೂದೂರು ಕಾಂಪ್ಲೆಕ್ಸ್ ನಲ್ಲಿ ಪಡಿತರ ಅಂಗಡಿಯಲ್ಲಿ ಕೆಲಸ ಮಾಡಲು ಹೋಗಿದ್ದೆವು.

5. ಆಗ ಗ್ರಾಹಕರ ಬೆರಳು ಮುದ್ರೆ ಪಡೆಯಲು, ನೆಟವರ್ಕ್ ನಿಧಾನ ವಾಗಿದ್ದರಿಂದ ಪಡೆಯಲು ಸಾಧ್ಯವಾಗಿರುವುದಿಲ್ಲ.

6. ಆಗ ಕಟ್ಟೆಯ ಮೇಲೆ ಕುಳಿತುಕೊಂಡು ಬೆರಳು ಮುದ್ರೆ ಪಡೆಯಲು ಎಷ್ಟು ಹೊತ್ತು ಎಂದು ಮತ್ತು ನಿಮಗೆ ಬಹಳ ಸೊಕ್ಕಾಗಿದೆ ಎಂದು ಅವಾಚ್ಯ ಶಬ್ದಗಳಿಂದ ಬೇಡರ ಸೂಳೆಮಕ್ಕಳೇ ಎಂದು ಜಾತಿನಿಂದೆನೆ ಮಾಡಿ ಬೈದಿರುತ್ತಾರೆ.

7. ಆಗ 1 ನೇ ಆರೋಪಿತನು ಚಾಸಾ-1 ಈತನ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾನೆ.

8. ಚಾಸಾ-2 ಈತನ ಅಂಗಿ ಹಿಡಿದು ಆರೋಪಿತರು ಎಳೆದಾಡಿರುತ್ತಾರೆ.

9. ಆಗ ನಾನು ಮತ್ತು ಚಾಸಾ-4 ಮತ್ತು 6 ಜಗಳವನ್ನು ಬಿಡಿಸಿಕೊಂಡಿರುತ್ತೇವೆ.

10. ಆಗ ಆರೋಪಿತರು ಇನ್ನೊಮ್ಮೆ ಹೀರೆಬೂದೂರಿಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣದ ಬೆದರಿಕೆಯನ್ನು ಸಹ ಹಾಕಿರುತ್ತಾರೆ.

11. ಆಗ ನಾವು ಎಲ್ಲರೂ ಮರಳಿ ಬಂದಿದ್ದು, ಚಾಸಾ-1 ಈತನು ಪೊಲೀಸ್ ಠಾಣೆಗೆ ಹೋಗಿರುತ್ತಾನೆ.

CW-03
PW-04

**<u>ಪಾಟೀ ಸವಾಲು ಶ್ರೀ ಎಸ್.ಜಿ.ಕೆ. ವಕೀಲರಿಂದ ಆರೋಪಿ ಪರವಾಗಿಃ</u>**

(ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯಾವು ವಿನೋದ್ ಕುಮಾರ v/s ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಪಾಟೀ ಸವಾಲನ್ನು ಮುಖ್ಯ ವಿಚಾರಣೆ ಮುಗಿದ ತಕ್ಷಣವೇ ಮಾಡಿ ಮುಗಿಸಬೇಕೆಂದು ಹೇಳಿರುವುದರಿಂದ, ಸಮಯಾವಕಾಶ ಕೊಡಲು ಯಾವುದೇ ಸಕಾರಣ ಇರದೇ ಇರುವುದರಿಂದ ಅವರ ಮನವಿಯನ್ನು ನಿರಾಕರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.